**OS: 36/2018**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 21.08.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ನಂಃ 1 ರವರ ಪರ ವಕೀಲರಿಂದ</u>**

ಈ ದಾವೆಯನ್ನು ಪ್ರತಿವಾದಿ ನಂಃ 1 ರವರ ವಿರುದ್ಧ ಸಲ್ಲಿಸಿರುತ್ತೇನೆ. ಎಷ್ಟು ಜಮೀನುಗಳ ಮೇಲೆ ದಾವೆ ಸಲ್ಲಿಸಿರುತ್ತೇನೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಬೇತೂರು ಚಿಕ್ರಪ್ಪ ಅಲಿಯಾಸ್ ಶಿಕರಪ್ಪರವರಿಗೆ ಒಬ್ಬನೇ ಮಗ ಬೇತೂರು ಕರಿಯಪ್ಪ ಎಂದರೆ ಸರಿ. ಸದರಿ ಕರಿಯಪ್ಪನ ಹೆಂಡತಿಯ ಹೆಸರು ಅಡಿವೆಮ್ಮ ಎಂದರೆ ಸರಿ. ಸದರಿ ಕರಿಯಪ್ಪ-ಅಡಿವೆಮ್ಮನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ಅವರುಗಳೆಂದರೆ ಸಿದ್ದಲಿಂಗಮ್ಮ, ಸಿದ್ದಮ್ಮ ಮತ್ತು ಚಿಕ್ರಪ್ಪ ಎಂದು ಇರುತ್ತಾರೆ. ಸದರಿ ಕರಿಯಪ್ಪ-ಅಡಿವೆಮ್ಮನಿಗೆ ನನ್ನ ತಾಯಿ ಮಗಳು ಅಲ್ಲ ಎಂದರೆ ಸರಿಯಲ್ಲ. ಚಿಕ್ರಪ್ಪನ ಹೆಂಡತಿಯ ಹೆಸರು ಸಣ್ಣ ವೀರಮ್ಮ ಅಲಿಯಾಸ್ ಪಕ್ಕೀರಮ್ಮ ಎಂದರೆ ಸರಿ, ಇವರ ಮಗ ಮಹೇಶಪ್ಪ ಎಂದರೆ ಸರಿ.

ದಾವಾ ಆಸ್ತಿಗಳು ಮೂಲತಃ ನನ್ನ ತಾತನಿಗೆ ಸೇರಿದ ಆಸ್ತಿಗಳು ಆಗಿರುತ್ತವೆ. ಸದರಿ ಆಸ್ತಿಗಳು ಸಿದ್ದಮ್ಮ ಮತ್ತು ಚಿಕ್ರಪ್ಪರವರ ತಂದೆಯ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಸಿದ್ದಲಿಂಗಮ್ಮರವರ ತಂದೆಯ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಕರಿಯಪ್ಪನವರ ಸ್ವಂತ ಆಸ್ತಿಗಳು ಎಂದರೆ ಸರಿ. ದಾವಾ ಅನುಸೂಚಿ 1 ಮತ್ತು 3 ರ ಆಸ್ತಿಗಳನ್ನು ಬೇತೂರು ಕರಿಯಪ್ಪರವರು ಸಿದ್ದಯ್ಯ ಮತ್ತು ಸಿದ್ದಲಿಂಗಯ್ಯರವರಿಂದ ದಿಃ 28.11.1929 ರಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಕರಿಯಪ್ಪನವರಿಗೆ ಸೇರಿದ ಆಸ್ತಿಗಳು ಇರುತ್ತವೆ. ದಾವಾ ಅನುಸೂಚಿ 6 ರ ಆಸ್ತಿಯನ್ನು ಬೇತೂರು ಕರಿಯಪ್ಪರವರು ಗುರುಸಿದ್ದನಗೌಡರವರಿಂದ 1921 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 7 ರ ಆಸ್ತಿಯನ್ನು ಬೇತೂರು ಕರಿಯಪ್ಪರವರು ಬಳೆಗಾರ ಕೊಟ್ರಪ್ಪ ಮತ್ತು ಬಳೆಗಾರ ಚನ್ನಬಸಪ್ಪರವರಿಂದ 1927 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಬೇತೂರು ಕರಿಯಪ್ಪರವರು 2ನೇ ಪ್ರತಿವಾದಿಗೆ ನೊಂದಾಯಿತ ದಾನ ಪತ್ರದ ಮೂಲಕ ದಾವಾ ಅನುಸೂಚಿ 1, 3 ರಿಂದ 5 ಆಸ್ತಿಗಳನ್ನು ಬರೆದುಕೊಟ್ಟಿದ್ದ ಎಂದರೆ ಸರಿಯಲ್ಲ. ಸದರಿ ಪತ್ರ ಬರೆದುಕೊಡುವ ಕಾಲಕ್ಕೆ 2ನೇ ಪ್ರತಿವಾದಿ ಅಪ್ರಾಪ್ತ ವಯಸ್ಕನಾದ ಕಾರಣ ಅವರ ತಾಯಿ ಸಿದ್ದವ್ವರವರನ್ನು ನೈಸರ್ಗಿಕ ಸಂರಕ್ಷಕರನ್ನಾಗಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಕರಿಯಪ್ಪ-

ಅಡಿವೆಮ್ಮ ತೀರಿಕೊಂಡ ನಂತರ 1ನೇ ಪ್ರತಿವಾದಿಯ ತಂದೆ, 2ನೇ ಪ್ರತಿವಾದಿಯ ತಾಯಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೂ ಭಾಗ ಕೊಡುತ್ತೇವೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಚಿಕ್ರಪ್ಪ ಮೃತಪಟ್ಟು 20 ವರ್ಷಗಳು ಆಗಿವೆ, ಸಿದ್ದವ್ವ ಮೃತಪಟ್ಟು 2 ವರ್ಷಗಳು ಆಗಿವೆ. ಸದರಿಯವರು ಮೃತಪಟ್ಟ ನಂತರ ಪ್ರತಿವಾದಿ ನಂಃ 1 ಮತ್ತು 2 ರವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನಮಗೂ ಭಾಗ ಕೊಡುತ್ತೇವೆಂದು ಹೇಳಿ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಕುಟುಂಬಕ್ಕೆ, ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆಸ್ತಿ ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ವಂಶವೃಕ್ಷದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ವಂಶವೃಕ್ಷ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ವಂಶವೃಕ್ಷ ಹಾಜರುಪಡಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಂಶಸ್ಥನಲ್ಲದೆ ಇರುವ ಕಾರಣಕ್ಕಾಗಿ ತಹಶೀಲ್ದಾರ್ ರವರಿಂದ ವಂಶವೃಕ್ಷ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗಾಲಿ, ನನ್ನ ತಾಯಿಗಾಗಲಿ ದಾವಾ ಆಸ್ತಿಯಲ್ಲಿ ಭಾಗ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**